ಸರಿಯಲ್ಲ ಬಹಳ ತ್ವರಿತವಾಗಿ ಕೆಲಸವಾಗುತ್ತಿದೆ. ಯಾವುದೇ ಸಾಮಗ್ರಿಗಳ ಕೊರತೆಯಿಲ್ಲ. ಹಿಂದೆ ಸ್ವಲ್ಪ ಕುಂಠಿತವಾಗಿತ್ತು. ಅದನ್ನು ಸರಿಪಡಿಸುವುದಕ್ಕೆ ಎಷ್ಟು ವೇಗದಿಂದ ಕೆಲಸ ಮಾಡಿಸಬೇಕೋ ಅಷ್ಟು ವೇಗದಿಂದ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಎಸ್.ಎ. ರವೀಂದ್ರನಾಥ್ : ಅಧ್ಯಕ್ಷರೆ, ಅಲ್ಲಿ ಶಾಂತಿಸಾಗರವೆಂದು ಒಂದು ಕೆರೆ ಇದೆ. ಆ ಕೆರೆಯ ಹಿಂದೆಯೇ ನಮ್ಮ ಜೆ.ಹೆಚ್. ಪಟೇಲ್‌ರವರ ಜಮೀನುಗಳು ಇರುವುದು. ಆದ್ದರಿಂದ ಡ್ಯಾಮ್‌ನ ಬಲದಂಡೆಯಲ್ಲಿ ಬಿದ್ದುಹೋಗಿರುವ ಭಾಗವನ್ನು ತ್ವರಿತವಾಗಿ ದುರಸ್ತಿ ಮಾಡುವುದಕ್ಕೆ ಜಾಸ್ತಿ ಚಿಂತನೆ ಮಾಡುತ್ತಿಲ್ಲ. ಏಕೆಂದರೆ ಅವರುಗಳ ಜಮೀನು ಇರುವುದು ಶಾಂತಿಸಾಗರದ ಹಿಂದೆ, ಶಾಂತಿಸಾಗರಕ್ಕೆ ಬೇಕಾದಷ್ಟು ನೀರನ್ನು ಅವರು ತುಂಬಿಸಿಕೊಂಡುಬಿಡುತ್ತಾರೆ. ಬೇಕಾದರೆ ತಾವು ಯಾವಾಗಾದರೂ ಹೋದಾಗ ನೋಡಬಹುದು. ಶಾಂತಿಸಾಗರ ಕೆರೆಯನ್ನು ಪೂರ್ಣವಾಗಿ ತುಂಬಿಸಿಕೊಳ್ಳುತ್ತಾರೆ, ಎರಡು ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಎರಡು ವರ್ಷಗಳಾದರೂ ಸಹ ಕೆರೆಯ ನೀರು ಖಾಲಿಯಾಗುವುದಿಲ್ಲ, ಅವರ ಜಮಿನಿಗೆ ನೀರಿನ ತೊಂದರೆಯಾಗುವುದಿಲ್ಲ. ಆದರೆ, ಆ ಭಾಗದಲ್ಲಿರುವ ಸಾಮಾನ್ಯ ರೈತರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬ ಬಗ್ಗೆ ಪರಿಶೀಲನೆ ಮಾಡಬೇಕು. ನೂರಾ ಇಪ್ಪತ್ತು ದಿವಸಗಳಲ್ಲಿ ಇಪ್ಪತ್ತು ದಿವಸ ನೀರಿಲ್ಲದಿದ್ದರೆ ಭತ್ತ, ಕಬ್ಬು ಮುಂತಾದ ಬೆಳೆಗಳು ಒಣಗಿಹೋಗಿ ರೈತರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ನೋಡಬಹುದು. ಆದ್ದರಿಂದ ಈಗಲಾದರು ಉಪಮುಖ್ಯಮಂತ್ರಿಯವರು ಅದರ ಬಗ್ಗೆ ಹೆಚ್ಚು ಗಮನಹರಿಸಿ ಮೂರು ತಿಂಗಳಲ್ಲಿ ಬಲದಂಡೆಯ ದುರಸ್ತಿಯಾಗುವ ಕೆಲಸವನ್ನು ಮಾಡಬೇಕು. ಅಲ್ಲಿ ಈಗ ಮಳೆಯು ಕಡಿಮೆಯಾಗಿದೆ. ದುರಸ್ತಿಯನ್ನು ಮಾಡಲು ಈಗ ಸೂಕ್ತವಾದ ಕಾಲವಾಗಿದೆ. ತಾವು ಬೇಗ ಆ ಕೆಲಸವನ್ನು ಮಾಡಿ ಮುಗಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೆ, ಭದ್ರಾ ಅಚ್ಚು ಕಟ್ಟು ಪ್ರದೇಶದಲ್ಲಿ ಬರುವ ಎಲ್ಲಾ ಕೆರೆಗಳನ್ನು ತುಂಬಿಸಲಾಗಿದೆ. ಆ ಕೆರೆ ತುಂಬಿದೆ, ನಮ್ಮ ಭಾಗದ ಕೆರೆ ತುಂಬಿಲ್ಲ, ಅದೇನೋ ನನ್ನ ಜಮೀನು ಬರುವ ಕೆರೆಗೆ ನೀರನ್ನು ತುಂಬಿದೆ ಎನ್ನುವ ಬಗ್ಗೆ ತಾವು ಯೋಚನೆ ಮಾಡಬಾರದು. ಅಲ್ಲಿರುವ ಎಲ್ಲಾ ರೈತರ ಹಿತರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಭದ್ರಾ ಜಲಾಶಯದಲ್ಲಿ ನೀರು ತುಂಬುತ್ತಿದೆ, ಅಲ್ಲಿ ತುಂಬುತ್ತಿರುವ ನೀರನ್ನು ತುಂಗಭದ್ರಾ ಡ್ಯಾಂಗೆ ಬಿಡುವುದರ ಬದಲಾಗಿ ಕೆರೆಗಳಿಗೆ ತುಂಬಿರಿ ಎಂದು ಹೇಳಿದ್ದೇವೆ. ಬಲದಂಡೆಯ ನಾಲೆಯ ಕೆಳಗಡೆಯೇ ನನ್ನ ಜಮೀನು ಇರುವುದು. ಮಾನ್ಯ ಸದಸ್ಯರೇನು ಶಾಂತಿಸಾಗರದ ಹಿಂದೆ ನನ್ನ ಜಮೀನಿದೆಯೆಂದು ತಿಳಿದುಕೊಂಡಿದ್ದಾರೆ ಅದು ತಪ್ಪು. ಬಲದಂಡೆಯ ನಾಲೆಯ ಕೆಳಗೆಯೇ ನನ್ನ ಜಮೀನು ಇರುವುದು. ಅದೇನೇ ಇರಲಿ ಇದನ್ನು ಆದಷ್ಟು ತ್ವರಿತವಾಗಿ ಕೆಲಸ ಮಾಡಿಸುತ್ತೇವೆ.

2. **ಬಾದಾಮಿ ತಾಲ್ಲೂಕು ಕೆರೂರು ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದರಿಂದ ಸಾರ್ವಜನಿಕರಿಗೆ ತೊಂದರೆ.**

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಅಧ್ಯಕ್ಷರೆ, ಬಾದಾಮಿ ತಾಲೂಕು ಕೆರೂರು ಪಟ್ಟಣದ ನೀರಿನ ಸಮಸ್ಯೆಯ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಹಾಗೂ ಹೆಚ್.ಕೆ.ಡಿ.ಬಿ. ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

1991ರ ಜನಗಣತಿಯ ಪ್ರಕಾರ ಕೆರೂರು ಪಟ್ಟಣದ ಜನಸಂಖ್ಯೆಯು 15198 ಇದ್ದು ಪ್ರಸ್ತುತ ಜನಸಂಖ್ಯೆಯು 18000 ಇರಬಹುದು. ಹಾಲಿ ಈ ಪಟ್ಟಣಕ್ಕೆ ಕೊಳವೆ

ಬಾವಿ ಮತ್ತು ತೆರೆದ ಬಾವಿಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹಾಲಿ 23 ಕೊಳವೆ ಬಾವಿಗಳು ಮತ್ತು 2 ತೆರೆದ ಬಾವಿಗಳಿವೆ. ಅವುಗಳಲ್ಲಿ 16 ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಮತ್ತು ಉಳಿದ ಬಾವಿಗಳಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಿದೆ.

ಹಾಲಿ ಕುಡಿಯುವ ನೀರಿನ ಯೋಜನೆಯ ಕೊಳವೆ ಬಾವಿಗಳಲ್ಲಿನ ಮತ್ತು ತೆರೆದ ಬಾವಿಗಳಲ್ಲಿನ ನೀರಿನ ಒರತೆ ಕಡಿಮೆ ಆಗುತ್ತಿರುವುದರಿಂದ ನಾಗರೀಕರಿಗೆ ನೀರಿನ ಸರಬರಾಜು ಮಾಡುವಲ್ಲಿ ಸ್ವಲ್ಪ ತೊಂದರೆ ಉಂಟಾಗಿರುತ್ತದೆ. ಹಾಲಿ ಯೋಜನೆಯ ನಿರ್ವಹಣೆಯನ್ನು ಪುರಸಭೆಯವರು ನಿರ್ವಹಿಸುತ್ತಿದ್ದಾರೆ.

ಈ ಪಟ್ಟಣಕ್ಕೆ ಶಾಶ್ವತ ನೀರಿನ ಮೂಲವು 8 ಕಿ.ಮೀ. ದೂರದಲ್ಲಿರುವ ಮಲಪ್ರಭ ಎಡದಂಡೆ ಕಾಲುವೆ ಆಗಿದ್ದು, ಈ ಕಾಲುವೆಯಿಂದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜು ಸುಮಾರು 4 ಕೋಟಿ ರೂ.ಗಳು ಆಗುತ್ತದೆ. ಆದರೆ, ಈ ಪಟ್ಟಣಕ್ಕೆ ಕೇಂದ್ರ ಸರ್ಕಾರವು ತ್ವರಿತ ನಗರ ನೀರು ಸರಬರಾಜು ಯೋಜನೆಯ ಅಡಿಯಲ್ಲಿ 37.80 ಲಕ್ಷ ರೂ.ಗಳ ಕೊಳವೆ ಬಾವಿ ಯೋಜನೆಯ ಅರ್ಧಭಾಗದ ಹಣವನ್ನು ಕೊಡಲು ಒಪ್ಪಿರುವುದರಿಂದ, ಈ ಪಟ್ಟಣಕ್ಕೆ 52.0 ಲಕ್ಷ ರೂ.ಗಳ ಅಂದಾಜನ್ನು ಕೊಳವೆ ಬಾವಿಗಳನ್ನು ಅನುಸರಿಸಿ ತಯಾರಿಸಲಾಗಿದೆ. ಈ ಯೋಜನೆಯ ಅಂದಾಜು ಪಟ್ಟಿಗೆ ಆಡಳಿತ ಅನುಮೋದನೆ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಹಾಗೂ ಈ ಯೋಜನೆಯನ್ನು ಶೀಘ್ರದಲ್ಲೇ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಅಧ್ಯಕ್ಷರೆ, ಕೆರೂರು ಪಟ್ಟಣವು ಸುಮಾರು ಹದಿನೈದು ಸಾವಿರ ಜನಸಂಖ್ಯೆಯುಳ್ಳ ಪಟ್ಟಣ. ತಮ್ಮ ಲೆಕ್ಕಾಚಾರದ ಪ್ರಕಾರ ಒಬ್ಬರಿಗೆ ಹತ್ತು ಗ್ಯಾಲನ್ ನೀರನ್ನು ಕೊಟ್ಟರು ಸಹ ಹದಿನೈದು ಸಾವಿರ ಗ್ಯಾಲನ್ ನೀರನ್ನು ಕೊಡಬೇಕು. ಈಗ ಅಲ್ಲಿ ಇಪ್ಪತ್ತು ಬೋರ್‌ವೆಲ್‌ಗಳನ್ನು ಹಾಕಿದ್ದರು ಸಹ ಒಂದು ಹನಿ ನೀರೂ ಬಾರದಿರುವ ಪರಿಸ್ಥಿತಿ ಇದೆ. ಇದರಿಂದ ಸುಮಾರು ಇಪ್ಪತ್ತು ಸಾವಿರ ಗ್ಯಾಲನ್‌ನಷ್ಟು ಮಾತ್ರ ನೀರು ಬರುತ್ತಿದೆ. ಆ ಪಟ್ಟಣದಲ್ಲಿರುವ ಬಹುಪಾಲು ಜನರು ನೇಕಾರಿಕೆಯನ್ನು ಮಾಡಿ ಕೊಂಡು ಅದರ ಮೇಲೆಯೇ ಅವಲಂಬಿತರಾಗಿದ್ದಾರೆ. ಅವರಿಗೆ ಉದ್ಯೋಗದಲ್ಲಿ ತೊಂದರೆ ಮತ್ತು ಕುಡಿಯುವ ನೀರಿಗೂ ಬಹಳ ತೊಂದರೆ ಇದೆ. ಅದಕ್ಕಾಗಿ ಅಲ್ಲಿಗೆ ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಮಾಡಬೇಕು. ಆ ನಿಟ್ಟಿನಲ್ಲಿ ನಾಲ್ಕು ಕೋಟಿ ರೂಪಾಯಿಗಳ ಯೋಜನೆ ಮಾಡಲು ತಡವಾಗಬಹುದು. ಆದಕ್ಕೆ ಒತ್ತಾಯ ಮಾಡುವ ಪರಿಸ್ಥಿತಿಯಲ್ಲಿ ನಾನು ಇಲ್ಲದಿದ್ದರೂ ಸಹ ಈಗೇನು 52 ಲಕ್ಷ ರೂಪಾಯಿಗಳ ಯೋಜನೆಯನ್ನು ತ್ವರಿತಗತಿಯಿಂದ ಕೆಲಸವನ್ನೇನು ಮಾಡಬೇಕೆಂದು ಏನು ಯೋಜನೆ ಇದೆ ಅದನ್ನು ಬೇಗ ಮಾಡಬೇಕು. ಈಗ accelerated urban water supply- ಮೂಲಕ ಕೇಂದ್ರ ಸರ್ಕಾರದವರು ಸಹ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು, ಕೇಂದ್ರ ಸರ್ಕಾರದ ಪಾಲಿನ ಹಣವನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದಿಂದ ಸುಮಾರು ಅರ್ಧ ಭಾಗದಷ್ಟು ಹಣವನ್ನು ಕೊಡಬೇಕಾಗಿದೆ, ಸುಮಾರು 33 ಲಕ್ಷ ರೂಪಾಯಿ ಹಣವನ್ನು ತಾವು ದಯವಿಟ್ಟು ಕೊಟ್ಟರೆ ಆ ಪಟ್ಟಣದಲ್ಲಿ ವಾಸ ಮಾಡುತ್ತಿರುವ ಜನರಿಗೆ ಬಹಳವರ್ಷಗಳಿಂದ ಇರುವ ಈ ಸಮಸ್ಯೆಯನ್ನು ಪರಿಹಾರ ಮಾಡಿದಂತಾಗುತ್ತದೆ. ಏಳು ದಿವಸಕ್ಕೆ ಒಂದುಸಾರಿ ಅಲ್ಲಿ ನೀರನ್ನು ಬಿಡುತ್ತಾರೆ. ಎರಡು ಮೂರು ಕಿಲೋಮೀಟರ್‌ವರೆಗೆ ಹೋಗಿ ಜನರು ನೀರನ್ನು ತರಬೇಕಾದ ಪರಿಸ್ಥಿತಿ ಅಲ್ಲಿದೆ. ಆದ್ದರಿಂದ ಅಲ್ಲಿನ ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗಾಗಿ 52 ಲಕ್ಷ

ರೂಪಾಯಿಗಳ ಯೋಜನೆಯೇನಿದೆ ಅದಕ್ಕೆ ಮಂಜುರಾತಿ ನೀಡುತ್ತೀರೋ ಹೇಗೆ ಎಂದು ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೇಂದ್ರ ಸರ್ಕಾರದಿಂದ ಐವತ್ತು ಪರ್‌ಸೆಂಟ್ ಹಣವನ್ನು ಕೊಡಲು ಒಪ್ಪಿದ್ದಾರೆ. ರಾಜ್ಯ ಸರ್ಕಾರವು ಸಹ accelerated watersupply scheme ..... ನಲ್ಲಿ ಐವತ್ತು ಪರ್‌ಸೆಂಟ್ ಹಣವನ್ನು ಕೊಡಬೇಕು. ಅದರ ಬಗ್ಗೆ ಬೋರ್ಡ್‌ನಿಂದ ನಮಗೆ ಪ್ರಪೋಸಲ್ ಬಂದಿದೆ.

ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಬೇಗನೆ ಕೊಟ್ಟು ಅದರ ಬಗ್ಗೆ ಕ್ರಮತಗೆದುಕೊಳ್ಳುತ್ತೇವೆ ಮತ್ತು ಅರ್ಧ ಭಾಗದಷ್ಟು ಹಣವನ್ನು ಕೊಡಲು ಕ್ರಮತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅಧ್ಯಕ್ಷರೆ. ಆ ರೀತಿ ಹಣವನ್ನು ಕೊಡುವುದಾಗಿದ್ದರೆ ಎಷ್ಟು ದಿವಸದಲ್ಲಿ ಕೊಡುತ್ತೀರೆಂದು ನಿರ್ದಿಷ್ಟವಾಗಿ ಹೇಳಬೇಕು. ಏಳು ದಿವಸಕ್ಕೆ ಒಂದು ಸಾರಿ ಕುಡಿಯವ ನೀರನ್ನು ಬಿಡುತ್ತಾರೆ. ಆ ರೀತಿ ಸಮಸ್ಯೆ ಇದೆಯೆಂದು ಹೇಳುತ್ತೇನೆ. ಮೂರು ಕಿಲೋಮೀಟರ್‌ವರೆಗೆ ಹೋಗಿ ನೀರನ್ನು ತರಬೇಕಾದ ಪರಿಸ್ಥಿತಿ ಇದೆ ಅಂಥ ಗಂಭೀರವಾದ ಪರಿಸ್ಥಿತಿ ಇದ್ದಾಗಲೂ ಸಹ ತಾವು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳುವ ಉತ್ತರವೂ ಸಾರ್ಥಕವಾದ ಉತ್ತರವಾಗುವುದಿಲ್ಲ. ಆದ್ದರಿಂದ ತಾವು ನಿರ್ದಿಷ್ಟವಾಗಿ ಎಷ್ಟು ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ವೈಜನಾಥ ಪಾಟೀಲ್ : ಆಗಷ್ಟು ಬೇಗ ಅದಕ್ಕೆ ಅಪ್ರೂವಲ್ ಕೊಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಿರ್ದಿಷ್ಟವಾದ ಸಮಯವನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಆದಷ್ಟು ಬೇಗ ಮಂಜೂರು ಮಾಡುವುದರ ಜೊತೆಗೆ ನಿರ್ದಿಷ್ಟವಾದ ಸಮಯವನ್ನು ಹೇಳಿ. ತಾವು ಅನೇಕ ಯೋಜನೆಗಳಿಗೆ ಮಂಜೂರಾತಿ ನೀಡುತ್ತೀರಿ, ಅದರ ಜೊತೆಯಲ್ಲಿ ಇದಕ್ಕೂ ಮಂಜೂರಾತಿ ಕೊಡಿ. ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕೆಲಸವನ್ನು ಪ್ರಾರಂಭ ಮಾಡುವುದಕ್ಕೇನು ತೊಂದರೆ? ಆದಷ್ಟು ಬೇಗನೆ ಮಾಡುತ್ತೇನೆ ಎಂದು ಹೇಳಿದರೆ, ಒಂದು ನಿರ್ದಿಷ್ಟವಾದ ಸಮಯ ಹೇಳಿ.

(3) ಗ್ರಾಮ ಪಂಚಾಯತಿ ಚುನಾವಣೆಗಳು ಆದ ನಂತರ ಅನೇಕ ಗ್ರಾಮ ಪಂಚಾಯತ್ ಕಚೇರಿಗಳಿಗೆ ಹಳೆಯ ಮಂಡಲ್ ಪಂಚಾಯತ್‌ಗಳು ಪಾವತಿ ಮಾಡಲು ಬಾಕಿ ಇರುವ ತ್ ಸಂಪರ್ಕವನ್ನು ಕಡಿತಗೊಳಿಸಿರುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಅಧ್ಯಕ್ಷರೇ, ಹಳೆಯ ಮಂಡಲ್ ಪಂಚಾಯತಿಗಳಿಂದ ವಿದ್ಯುತ್ ಬಾಕಿ ಪಾವತಿ ಮಾಡದೇ ಇರುವುದರಿಂದ ಈಗಿನ ಗ್ರಾಮಪಂಚಾಯತಿ ಕಚೇರಿಗಳ ವಿದ್ಯುತ್ ಸಂಪರ್ಕವನ್ನು ತೆಗೆದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು : ಅವರು ಡೆನ್ಮಾರ್ಕ್ ಪ್ರೈಮ್ ಮಿನಿಸ್ಟರ್ ಅವರ ಪ್ರೋಗ್ರಾಮ್‌ಗೆ ಹೋಗಿದ್ದಾರೆ. ವಸತಿ ಸಚಿವರು ಅವರ ಪರವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಬಸವರಾಜರಾಯರೆಡ್ಡಿ (ವಸತಿಮಂತ್ರಿ) : ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ಈ ಉತ್ತರವನ್ನು ಕೊಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ.